ಓ ಎಸ್ .ನಂ.545/2015

**ಪಿಡಬ್ಲ್ಯು−2**

**ದಿನಾಂಕ 07-08-2023 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ.ಜಿ ಎಸ್ ಎಸ್ ಪ್ರತಿವಾದಿ ಪರ ವಕೀಲರವರಿಂದ.**

ನಾನು ತರಕಾರಿ ವ್ಯಾಪಾರ ಮಾಡುತ್ತೇನೆ. ದಾವಾ ಆಸ್ತಿಯು ಖುಲ್ಲಾ ಜಾಗೆ ಹಾಗೂ ಅದರಲ್ಲಿ ಒಂದು ಶೆಡ್ ಇರುತ್ತದೆ. ಅದರ ನಂಬರ್ 628 ಇರುತ್ತದೆ. ಅದು 3 ಗುಂಟೆ ಇರುತ್ತದೆ. 3 ಗುಂಟೆ ಜಮೀನಿನ ಮಾಲೀಕರು ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದರಲ್ಲಿ ಪಾಲನಕರ್ ರವರು ವಾಸವಿರುತ್ತಾರೆ. ಅವರ ಆಸ್ತಿ ನಂಬರ್ 628 ಇರುತ್ತದೆ. ಪಾಲನಕರ್ ರವರು ಆಸ್ತಿಯಲ್ಲಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಪಾಲನಕರ್ ರವರಿಗೆ ಸೇರಿದ ಡಬ್ಬಿಯ ಶೆಡ್ ಇರುತ್ತದೆ. ಅದು ರಸ್ತೆಯ ಮೇಲೆ ಇರುವುದಿಲ್ಲ, ಅವರ ಜಾಗೆಯಲ್ಲಿ ಇರುತ್ತದೆ. ನಾನು ದಾಖಲೆಗಳನ್ನು ನೋಡಿರುವುದಿಲ್ಲ . ಪ್ರತಿವಾದಿಯ ಜಾಗೆ ಪೂರ್ವಕ್ಕೆ ಇರುತ್ತದೆ. ಪಾಲನಕರ್ ರವರ ಜಮೀನು ಪಶ್ಚಿಮಕ್ಕೆ ಇರುತ್ತದೆ . ಪಾಲನಕರ್ ರವರ ಬಂಗಾರದ ಅಂಗಡಿ ಇರುತ್ತದೆ ಹಾಗೂ ಆಸ್ತಿಯಲ್ಲಿ ಅವರೇ ಕಬ್ಜೆದಾರರು ಇರುತ್ತಾರೆ ಎಂದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಶಾಂತ್ ಹಾಗೂ ಜಗದೀಶ್ ಪಾಲಂಕರ್ ರವರು ದಾವೆಯನ್ನು ಸಲ್ಲಿಸಿರುತ್ತಾರೆ. ದಾವೆಯನ್ನು ಅಬ್ದುಲ್ ಮುನಾಫ್ ರವರ ವಿರುದ್ದ ಸಲ್ಲಿಸಿರುತ್ತಾರೆ . ಅಬ್ದುಲ್ ಮುನಾಫ್ ಜೀವಿತ ಇರುತ್ತಾರೆ ಅಥವಾ ಇಲ್ಲ ಎಂಬುದು ನನಗೆ ಗೊತ್ತಿರುವುದಿಲ್ಲ. ನಾನು ವಾದಿಯರ ಅಂಗಡಿಯಲ್ಲಿ ಕೆಲಸ ಮಾಡುವುದಿಲ್ಲ. ನಾನು ಮಾರ್ಕೇಟ್ ದಲ್ಲಿ ಖುಲ್ಲಾ ಜಾಗೆಯಲ್ಲಿ ವ್ಯಾಪಾರ ಮಾಡುತ್ತೇನೆ . ದಾವೆಯ ಬಗ್ಗೆ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯರ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**ಓ ಎಸ್ .ನಂ.545/2015**
**ಪಿಡಬ್ಲ್ಯು–2**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.